# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 257/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ನವೀನ್ ಕುಮಾರ್.ಎಂ.ಆರ್ | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ ಶ್ರೀ ಎಂ.ಎಸ್.ರಾಜ್ ಕುಮಾರ್ | **12.08.2024** | |
| ವಯಸ್ಸು | ಃ **35** ವರ್ಷ | | |
| ವೃತ್ತಿ | ಃ ನಾಯಿ ಸಾಕಾಣಿಕೆ | **ಪ್ರಾ.ಸಾ.** ಃ | **01** |
| ವಾಸಸ್ಥಳ | ಃ ರಾಮಾನುಜ ರೋಡ್, ಮೈಸೂರು | **ಚಾ.ಸಾ.** ಃ | **01** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ದಿಃ*02.10.2020* ರಂದು ನನ್ನ ಹುಟ್ಟುಹಬ್ಬ ಇದ್ದು ಆ ದಿನ ನಾನು ನನ್ನ ಸ್ನೇಹಿತರಿಗೆ ಸಿಕ್ಕಿಲ್ಲವಾದ್ದರಿಂದ ದಿಃ*04.10.2020* ರಂದು ರಾತ್ರಿ *10.30-11* ಗಂಟೆ ವೇಳೆಯಲ್ಲಿ ನನ್ನ ಸ್ನೇಹಿತರಾದ ಪವನ್ ಮತ್ತು ರಮೇಶ್ ಇವರು ನಮ್ಮ ಮನೆಗೆ ಬಂದಿದ್ದರು. ಆ ಕಾಲಕ್ಕೆ ರಾತ್ರಿ ಮಾತನಾಡುತ್ತಾ ಕುಳಿತು ಟೀ ಕುಡಿಯಲು ನನ್ನ ಸ್ನೇಹಿತರಾದ ರಮೇಶ ಇವರ ಕಾರಿನಲ್ಲಿ ಜೆ.ಎಸ್.ಎಸ್ ಆಸ್ಪತ್ರೆ ಬಳಿ ಇರುವ ಎಂ.ಜಿ. ರಸ್ತೆಯಲ್ಲಿನ ಟೀ ಅಂಗಡಿಗೆ ಟೀ ಕುಡಿಯಲು ಹೋಗಿದ್ದೆವು. ಟೀ ಕುಡಿದು ವಾಪಸ್ಸು ಬರುತ್ತಿರುವಾಗ ರಾತ್ರಿ ಜೆ.ಎಸ್.ಎಸ್ ಆಸ್ಪತ್ರೆ ಮುಂಭಾಗದಲ್ಲಿರುವ ರೋಡ್ ಹಂಪ್ಸ್ ಬಳಿ ಬಂದಾಗ *1* ನೇ ಆರೋಪಿತ ಅಂಬರೀಶ್ ಇವರು ಕಾರಿಗೆ ಕೈ ಅಡ್ಡ ಹಾಕಿದ್ದರು. ಆಗ ನಾವು ಏನೋ ಆಸ್ಪತ್ರೆ ಬಳಿ ಎಂದು ಕಾರನ್ನು ನಿಲ್ಲಿಸಿದಾಗ ನನ್ನ ಸ್ನೇಹಿತ ರಮೇಶನಿಗೆ *1* ನೇ ಆರೋಪಿ ಅಂಬರೀಶ ಕೈಯಿಂದ ಹೊಡೆದಿದ್ದ ಆಗ ನಾನು ಮತ್ತು

ಪವನ್ ಕಾರಿನಿಂದ ಕೆಳಗೆ ಇಳಿದು ಯಾಕೆ ಆ ರೀತಿ ಹೊಡೆಯುತ್ತೀಯಾ ಎಂದು *1*ನೇ ಆರೋಪಿತನನ್ನು ಕೇಳಿದಾಗ *1* ಮತ್ತು *2* ನೇ ಆರೋಪಿತ ಸೇರಿ ನಮಗೆ ಹೊಡೆದಿದ್ದರು. ಆ ಕಾಲಕ್ಕೆ *1*ನೇ ಆರೋಪಿತನು ರೇಜರ್ ನಿಂದ ನನ್ನ ಮುಖ, ಕಣ್ಣು, ಬಾಯಿ ಮತ್ತು ಕತ್ತಿಗೆ ಹೊಡೆದಿದ್ದ. ಆ ಘಟನೆ ಬಳಿಕ ನಾನು ಸೀತಾರಂಗ ಆಸ್ಪತ್ರೆಗೆ ಹೋಗಿದ್ದೆ ಆದರೆ ಅಲ್ಲಿ ವೈದ್ಯರು ಇರಲಿಲ್ಲವಾದ್ದರಿಂದ ಜೆ.ಎಸ್.ಎಸ್ ಆಸ್ಪತ್ರೆಗೆ ಹೋಗಿದ್ದೆ. ಆಗ ಅವರು ಶಸ್ತ್ರ ಚಿಕಿತ್ಸೆ ಮಾಡಬೇಕು ಎಂದು ಹೇಳಿದ್ದರು ಆಗ ನಾನು ಮನೆಯವರಿಗೆಲ್ಲಾ ತಿಳಿಸಿ ಮರುದಿನ ಬೆಳಗ್ಗೆ ಭಾನವಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೆ.

*2.* ಆ ಘಟನೆ ಕಾಲಕ್ಕೆ ರಮೇಶನಿಗೆ ಬಾಯಿಯ ಬಲಭಾಗಕ್ಕೆ ಗಾಯವಾಗಿತ್ತು. ಪವನ್ ಎನ್ನುವವರಿಗೆ ಕೈ ಬೆರಳಿಗೆ ಗಾಯವಾಗಿತ್ತು. ನಂತರ ದಿಃ*05.10.2020* ರಂದು ಪೋಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ದೂರು ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಿ.ಪಿ-*1* ಮತ್ತು ಸಹಿಯನ್ನು ನಿ.ಪಿ-*1*(ಎ) ಎಂದು ಗುರುತಿಸಿದೆ. ದೂರು ಕೊಟ್ಟ ಮರುದಿನ ಪೋಲೀಸರು ಘಟನೆ ಸ್ಥಳದಲ್ಲಿ ಮಹಜರ್ ಮಾಡಿದ್ದರು. ಮದ್ಯಾಹ್ನ *12.30* ರಿಂದ *1* ಗಂಟೆ ಸಮಯದಲ್ಲಿ ಮಹಜರ್ ಮಾಡಿದ್ದರು. ಆ ಕಾಲಕ್ಕೆ ಘಟನೆ ವೇಳೆಯಲ್ಲಿ ನಾನು ಧರಿಸಿದ್ದ ಬಟ್ಟೆಯನ್ನು ಅಮಾನತ್ತು ಪಡಿಸಿಕೊಂಡಿದ್ದರು. ಮಹಜರ್ ಕಾಲಕ್ಕೆ ಘಟನೆ ವೇಳೆಯಲ್ಲಿ ಬಿದಿದ್ದ ರಕ್ತವನ್ನು ಸಹ ಅಮಾನತ್ತು ಪಡಿಸಿಕೊಂಡಿದ್ದರು. ಈಗ ನಾನು ನೋಡುತ್ತಿರುವ ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಮಹಜರ್ ಅನ್ನು ನಿ.ಪಿ-*2* ಮತ್ತು ಸಹಿಯನ್ನು ನಿ.ಪಿ-*2*(ಎ) ಎಂದು ಗುರುತಿಸಿದೆ. ಘಟನೆ ಕಾಲಕ್ಕೆ ಹಲ್ಲೆ ಮಾಡಲು ಉಪಯೋಗಿಸಿದ್ದ ರೇಜರ್ ನೋಡಿದರೆ ಗುರುತಿಸುತ್ತೇನೆ. ನಂತರ ಪೋಲೀಸ್ ಠಾಣೆಗೆ ನನ್ನನ್ನು ಪುನಃ ಕರೆಸಿ ಘಟನೆ ಬಗ್ಗೆ ಸಂಪೂರ್ಣ ವಿವರಣೆ ಪಡೆದಿದ್ದರು. ಆ

ಕಾಲಕ್ಕೆ 1 ನೇ ಆರೋಪಿತನನ್ನು ನನಗೆ ತೋರಿಸಿರಲಿಲ್ಲ. ಈಗ ನಾನು ನೋಡುತ್ತಿರುವ ರೇಜರ್, ರಕ್ತ ಹತ್ತಿದ ಡಾಂಬರ್, ರಕ್ತ ಹತ್ತದೇ ಇದ್ದ ಡಾಂಬರ್ ಮತ್ತು ಟಿ.ಶರ್ಟ್ ಆ ಮಹಜರ್ ಕಾಲಕ್ಕೆ ಅಮಾನತುತ ಪಡಿಸಿಕೊಂಡ ವಸ್ತುಗಳು ಇವೆ. ಸದರಿ ವಸ್ತುಗಳನ್ನು ಎಂ.ಒ 1 ರಿಂದ 4 ಎಂದು ಗುರುತಿಸಿದೆ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

3. ದಿಃ21.10.2020 ರಂದು ಕೋರ್ಟ್ ಮುಂದೆ ಇರುವ 1 ನೇ ಆರೋಪಿತನನ್ನು ನನಗೆ ತೋರಿಸಿದಾಗ ಆ ದಿನ ನನಗೆ ಹಲ್ಲೆ ಮಾಡಿದ್ದ ವ್ಯಕ್ತಿ ಎಂದು ಗುರುತಿಸಿ ಮುಂದುವರೆದ ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದು ಸೂಕ್ತ ಕಾರಣ ಹೇಳದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು